## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 20ಕಿ.ಮೀ. ನಂತೆ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಹಂತ-3ರ ಕಾರ್ಯಕ್ರಮದಲ್ಲಿ ವಿಶೇಷ ಅಭಿವೃದ್ಧಿ ಯೋಜನೆ (SDP) ಯಂತೆ ಅನುಷ್ಠಾನಗೊಳಿಸಿದ ಕಾಮಗಾರಿಗಳ ಬಿಲ್ ಪಾವತಿಗಾಗಿ 2016-17ನೇ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ತ್ರೈಮಾಸಿಕ ಅನುದಾನ ಬಿಡುಗಡೆಗೊಳಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:

1. ಗ್ರಾಅಪ:22:ಆರ್‌ಆರ್‌ಸಿ:2014, ದಿ:18-11-2014 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ಗ್ರಾಅಪ:22/1:ಆರ್‌ಆರ್‌ಸಿ: 2014, ದಿ:20-12-2014.
2. ಗ್ರಾಅಪ:6:ಆರ್‌ಆರ್‌ಸಿ:2015, ದಿ:31-3-2015.
3. ಕೆಆರ್‌ಆರ್‌ಡಿಎ ಪತ್ರ ಸಂಖ್ಯೆ:ಕೆಆರ್‌ಆರ್‌ಡಿಎ/ಎಸಿ-05/2016-17/1951 ದಿ:4-8-2016.
4. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:FD/3/TFP/2016, ದಿ:2-4-2016.
5. ಯೋಜನಾ ಇಲಾಖೆಯ ಟಿಪ್ಪಣಿ ಕಂಡಿಕೆ ಸಂ:ಪಿಡಿ 01 ಎಸ್‌ಡಿಪಿ 2016 (ಗ್ರಾ&ಪಂರಾ) ದಿ:30-7-2016

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಗ್ರಾಮೀಣ ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಮಾರ್ಗಸೂಚಿ ಹಾಗೂ ಮಾನದಂಡಗಳನ್ನು ಅನುಸರಿಸಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮುಖಾಂತರ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯನ್ನು ಹಂತವಾರು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯ ಹಂತ-3ರಡಿ ರಾಜ್ಯದ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಪ.ಜಾ./ಪಂ.ಪಂ ಜನರು ಹೆಚ್ಚು ವಾಸಿಸುವ ಗ್ರಾಮಗಳಿಗೆ ಸಂಪರ್ಕ ಒದಗಿಸಲು 8 ಕಿ.ಮೀ. ಒಳಗೊಂಡಂತೆ ಒಟ್ಟು 20 ಕಿ.ಮೀ. ನಂತೆ ರಾಜ್ಯದ ಒಟ್ಟು 1493 ರಸ್ತೆ ಕಾಮಗಾರಿಗಳ ಒಟ್ಟು ಉದ್ದ 3855.23ಕಿ.ಮೀ. ಹಾಗೂ 73 ಉದ್ದ ಸೇತುವೆಗಳನ್ನು (LSB) ರೂ.2676.57 ಕೋಟಿ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಮೇಲೆ ಓದಲಾದ-2ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಆದೇಶದಂತೆ ಈ ಯೋಜನೆಯಡಿ ಕೈಗೊಂಡ ಟೆಂಡರ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2015-16ನೇ ಸಾಲಿನಲ್ಲಿ ಒಟ್ಟಾರೆ ವೆಚ್ಚವನ್ನು ಯೋಜನಾ ಅಂದಾಜಿನ ಶೇ.15ರಷ್ಟು ವೆಚ್ಚಕ್ಕೆ ಮಿತಿಗೊಳಿಸಲು ಹಂತ-3ರಡಿ ಪ್ರಗತಿ ಹೊಂದಿದ ಸದರಿ ಕಾಮಗಾರಿಗಳಿಗೆ 2015-16ನೇ ಸಾಲಿನಲ್ಲಿ ರೂ.401.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಪ್ರಸ್ತುತ 2016-17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ-3054-04-337-1-12-059/133(SDP)/422/423ರಡಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಕಾಮಗಾರಿಗಳಿಗೆ ಒಟ್ಟಾರೆ

ರೂ.1706.30 ಕೋಟಿಗಳನ್ನು ಒದಗಿಸಲಾಗಿರುತ್ತದೆ. ಪ್ರಸ್ತುತ ಸಾಲಿನ ಆಯವ್ಯಯದ ಈ ಲೆಕ್ಕಶೀರ್ಷಿಕೆ-3054-04-337-1-12-133-ವಿಶೇಷ ಅಭಿವೃದ್ಧಿ ಯೋಜನೆಗೆಂದು (SDP) ರೂ.300.00 ಕೋಟಿ ನಿಗಧಿ ಮಾಡಿದಂತೆ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3ರ ಕಾಮಗಾರಿಗಳನ್ನು ಒಳಗೊಂಡಂತೆ ಹಿಂದುಳಿದ ತಾಲ್ಲೂಕುಗಳಲ್ಲಿ CDI ಆಧರಿಸಿ ತಾಲ್ಲೂಕುವಾರು ಸವಿವರ ಕ್ರಿಯಾ ಯೋಜನೆಯನ್ನು ತಯಾರಿಸಿ ಯೋಜನಾ ಇಲಾಖೆಗೆ ಸಲ್ಲಿಸಲಾಗಿ, ಯೋಜನಾ ಇಲಾಖೆಯ ಟಿಪ್ಪಣಿ ಕಂಡಿಕೆ ಸಂಖ್ಯೆ:ಪಿಡಿ 01 ಎಸ್‌ಡಿಪಿ 2016 (ಗ್ರಾ&ಪಂರಾ) ದಿ:30-7-2016ರಲ್ಲಿ ಇಲಾಖೆಯ ವಿಶೇಷ ಅಭಿವೃದ್ಧಿ ಕಾರ್ಯಕ್ರಮದ (SDP) ಕ್ರಿಯಾ ಯೋಜನೆಗೆ ಒಪ್ಪಿಗೆ ನೀಡಿದೆಯೆಂದು ತಿಳಿಸಿರುವುದರಿಂದ ಅದರಂತೆ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯು ಸಲ್ಲಿಸಿದ ವಿಶೇಷ ಅಭಿವೃದ್ಧಿಯ ಉಪ ಲೆಕ್ಕಶೀರ್ಷಿಕೆ-5054-04-337-1-12-133ರಡಿಯ ಕ್ರಿಯಾ ಯೋಜನೆ ಕಾಮಗಾರಿಗಳಿಗೆ ಮೇಲೆ ಓದಲಾದ-3ರಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯು ಕೋರಿರುವಂತೆ ಅನುದಾನ ಬಿಡುಗಡೆಗೊಳಿಸುವುದು ಅಗತ್ಯವಿರುತ್ತದೆ.

ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ:FD/03/TFP/2016, ದಿನಾಂಕ:2-4-2015ರಲ್ಲಿ ಆಡಳಿತ ಇಲಾಖೆಗೆ ನೀಡಿರುವ ಅವಕಾಶದನ್ವಯ 2016-17ನೇ ಸಾಲಿನ ಆಯವ್ಯಯ ರಾಜಸ್ವ ಲೆಕ್ಕಶೀರ್ಷಿಕೆ-3054-04-337-1-12-059/133/422/423ರಡಿ ರೂ.1706.30ಕೋಟಿಗಳನ್ನು (SDP ಗೆ ನಿಗಧಿಪಡಿಸಿದ ರೂ.300.00ಕೋಟಿ ಸೇರಿ) ಒದಗಿಸಿದ್ದು, SDP ಗೆ (objective code-133) ನಿಗಧಿಪಡಿಸಿದ ರೂ.300.00ಕೋಟಿಗಳಲ್ಲಿ ಪ್ರಥಮ ಮತ್ತು ದ್ವಿತೀಯ ತ್ರೈಮಾಸಿಕ ಕಂತಿನ ಅನುದಾನ ತಲಾ ರೂ.75.00ಕೋಟಿಗಳಂತೆ ಒಟ್ಟಾರೆ ರೂ.150.00ಕೋಟಿಗಳನ್ನು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:50/2:ಆರ್‌ಆರ್‌ಸಿ:2016, ಬೆಂಗಳೂರು, ದಿನಾಂಕ:10-8-2016.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ರಾಜ್ಯದ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3ರಡಿಯ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕಮ- ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಬಿಲ್ ಪಾವತಿಗಾಗಿ ಪ್ರಥಮ ಮತ್ತು ದ್ವಿತೀಯ ತ್ರೈಮಾಸಿಕ ಅನುದಾನ ತಲಾ **ರೂ.75.00**ಕೋಟಿಯಂತೆ ಒಟ್ಟಾರೆ **ರೂ.150.00**ಕೋಟಿಗಳನ್ನು (ರೂ. **ಒಂದು ನೂರ ಐವತ್ತು ಕೋಟಿಗಳು** ಮಾತ್ರ) ಪ್ರಸ್ತುತ 2016-17ನೇ ಸಾಲಿನ ಲೆಕ್ಕಶೀರ್ಷಿಕೆ-**3054-04-337-1-12-133**ರಡಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ. ಈ ಅನುದಾನವನ್ನು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಲ್ಲಿ ಪ್ರತ್ಯೇಕವಾದ ಪ್ರೋಗ್ರಾಂ ಖಾತೆಯಲ್ಲಿರಿಸಿಕೊಂಡು ಸಂಬಂಧಿಸಿದ ಯೋಜನಾ ವಿಭಾಗಗಳು ಸಮರ್ಪಕವಾಗಿ ವಿನಿಯೋಗಿಸತಕ್ಕದ್ದು.

**ಷರತ್ತುಗಳು:**

1. ಸದರಿ ಅನುದಾನವನ್ನು ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ರವರು ಗ್ರಾಂಟ್-ಇನ್-ಏಡ್ ಬಿಲ್ಲು ಸಲ್ಲಿಸಿ, ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ (ಗ್ರಾಮೂಸೌ) ರವರ ಮೇಲು ರುಜು ಪಡೆದು ಖಜಾನೆಯಿಂದ ಚೆಕ್ ಪಡೆಯುವುದು.

2. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ರವರು ಸದರಿ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3. ಈ ಅನುದಾನವನ್ನು ಪ್ರಸ್ತುತ 189 ಗ್ರಾಮೀಣ ಮತಕ್ಷೇತ್ರಗಳಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯ ಹಂತ-3ರ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಂತೆ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮದಡಿ ಅನುಮೋದನೆಯಾದ ಕಾಮಗಾರಿಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು. ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದಲ್ಲ.

4. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯು ಮುಂದಿನ 3ನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿನ ಬಿಡುಗಡೆ ಹಾಗೂ ಹಿಂದಿನ ಶಿಲ್ಕು ಸೇರಿ ಒಟ್ಟು ಬಿಡುಗಡೆಯಲ್ಲಿ ಶೇ.75ರಷ್ಟು ವೆಚ್ಚ ಭರಿಸತಕ್ಕದ್ದು.

5. ಈ ಯೋಜನೆಯ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸುವ ಸಂದರ್ಭದಲ್ಲಿ ಜ್ಯೇಷ್ಠತೆ ಆಧಾರದ ಮೇಲೆ ಬಾಕಿ ಬಿಲ್ಲುಗಳನ್ನು ಪಾವತಿಸಲು ಕೆಳಕಂಡ ಪದ್ಧತಿಯನ್ನು ತಪ್ಪದೆ ಅನುಸರಿಸುವುದು.

(1) ಪ್ರತಿ ಕಾಮಗಾರಿಯ ಅಂದಾಜು ಪತ್ರಿಕೆ, ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಿದವರ ಹೆಸರು, ಪದನಾಮ ಹಾಗೂ ನೀಡಿದ ದಿನಾಂಕದ ಮಾಹಿತಿ.

(2) ಆಯಾ ಬಿಲ್ಲುಗಳಿಗೆ ಸಂಬಂಧಿಸಿದ ಪರಿವೀಕ್ಷಣಾ ವರದಿ, ಕಾಮಗಾರಿ ಸ್ಥಳದಲ್ಲಿ ಕಾರ್ಯಕಾರಿ ಇಂಜಿನಿಯರ್ ಅಥವಾ ಸಹಾಯಕ ಕಾರ್ಯಕಾರಿ ಇಂಜಿನಿಯರ್ ಪರಿವೀಕ್ಷಣೆ ಮಾಡುತ್ತಿರುವ ಫೋಟೋ, ಕಾಮಗಾರಿ ಪೂರ್ಣಗೊಂಡ ಫೋಟೋ ಹಾಗೂ ವೀಡಿಯೋಗ್ರಾಫ್ (ರಸ್ತೆ ಕಾಮಗಾರಿಯಾಗಿದ್ದಲ್ಲಿ ರಸ್ತೆಯ ಪೂರ್ಣ ವೀಡಿಯೋಗ್ರಾಫ್).

(3) ಕಾಮಗಾರಿ ಪೂರ್ಣಗೊಂಡು ಯಾರಿಗೆ ಮತ್ತು ಯಾವ ದಿನಾಂಕದಂದು ಹಸ್ತಾಂತರಿಸಲಾಗಿದೆ ಎಂಬುದರ ಸಂಪೂರ್ಣ ಮಾಹಿತಿ ಹಾಗೂ ಹಸ್ತಾಂತರಿಸಿದ ಆಸ್ತಿಯನ್ನು ಸ್ವೀಕರಿಸಿದವರಿಂದ ದೃಢೀಕರಣ.

(4) ಈ ಎಲ್ಲಾ ಅಂಶಗಳನ್ನು ಮುಖ್ಯ ಕಾರ್ಯಾಚರಣೆ ಅಧಿಕಾರಿಗಳವರು ಗಂಭೀರವಾಗಿ ಗಮನಿಸಿ ದೃಢೀಕರಿಸಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವುದು. ಈ ಸೂಚನೆಗಳನ್ನು ನಿರ್ಲಕ್ಷಿಸುವವರನ್ನು ಜವಾಬ್ದಾರರನ್ನಾಗಿ ಹಾಗೂ ಹೊಣೆಗಾರರನ್ನಾಗಿ ಮಾಡಲಾಗುವುದು.

6. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:53:ಆರ್‌ಆರ್‌ಸಿ:15(ಭಾಗ-1), ದಿನಾಂಕ:15-5-2015ರಲ್ಲಿನ ಸೂಚನೆಯಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯ ಪಾವತಿಗಾಗಿ ಸಲ್ಲಿಸುವ ಬಿಲ್ಲುಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರುಗಳು ರಸ್ತೆ ಕಾಮಗಾರಿಗಳ ದಾಖಲೆ ಪರಿಶೀಲಿಸಿ ಬಿಲ್ಲುಗಳ ಮೊತ್ತವು ಕಾಮಗಾರಿಗೆ ಅನುಗುಣವಾಗಿ ಸರಿಯಾಗಿರುವುದೆಂದು ಮತ್ತು ಬಿಲ್ಲು ಮೊತ್ತವು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿರುವುದನ್ನು ದೃಢೀಕರಿಸುವ ಕಾರ್ಯವನ್ನು ತಪ್ಪದೆ ಪಾಲಿಸತಕ್ಕದ್ದು.

7. ಬಳಕೆಯಾದ ಹಣ ಮತ್ತು ಕಾಮಗಾರಿ ಪ್ರಗತಿಯನ್ನು ಪ್ರತಿ ಮಾಹೆ ಸರ್ಕಾರಕ್ಕೆ ಒದಗಿಸತಕ್ಕದ್ದು.

8. ಈ ಕಾರ್ಯಕ್ರಮದಡಿ ರೂ.300.00ಕೋಟಿ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ವಿಶೇಷ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಯಂತೆ ಕಟ್ಟು ನಿಟ್ಟಾಗಿ ಅನುಸರಿಸಬೇಕೆಂಬ ನಿಬಂಧನೆಯ ಮೇಲೆ ಯೋಜನಾ ಇಲಾಖೆಯು ಒಪ್ಪಿಗೆ ನೀಡಿದ್ದು, ಅದರಂತೆ ಕೆಳಕಂಡ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

(1) SDP ಕಾರ್ಯಕ್ರಮದ ಕ್ರಿಯಾ ಯೋಜನೆ ಮಾಹಿತಿಯನ್ನು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಕಳುಹಿಸುವುದು.

(2) ತಾಲ್ಲೂಕುವಾರು ಕ್ರಿಯಾ ಯೋಜನೆ ಮಾಹಿತಿಯನ್ನು SDP ಅಂತರ್ಜಾಲದಲ್ಲಿ (sdp.kar.nic.in) ಅಳವಡಿಸಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಖಾತ್ರಿ ಪಡಿಸಿಕೊಳ್ಳುವುದು.

(3) ಸಮಗ್ರವಾದ ಎಂಪಿಕ್ ನ್ನು ತಯಾರಿಸಿ ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಯವರಿಗೆ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುವ ಮತ್ತು ಉಸ್ತುವಾರಿ ಮಾಡಿರುವ ಬಗ್ಗೆ ಕಾರ್ಯದರ್ಶಿ ಮಟ್ಟದ ಎಂಎಂಆರ್ ಸಭೆಗಳಲ್ಲಿ ಖಾತ್ರಿ ಮಾಡಿಕೊಳ್ಳುವುದು.

(4) ಅಂತರ್ಜಾಲದಲ್ಲಿನ ತಾಲ್ಲೂಕುವಾರು ಮಾಹಿತಿಯನ್ನು ನಿಯಮಿತವಾಗಿ ಇಂದೀಕರಿಸಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು.

(5) ಪ್ರತಿ ತಿಂಗಳು 15 ರಂದು ಹಿಂದಿನ ತಿಂಗಳಲ್ಲಿ ಸಾಧಿಸಿದ SDP ಪ್ರಗತಿಯ ವಿವರಗಳನ್ನು (hard copy) ಸರ್ಕಾರದ ಉಪ ಕಾರ್ಯದರ್ಶಿ, ವಿಶೇಷ ಕೋಶ, ಯೋಜನಾ ಇಲಾಖೆ, ಕೊಠಡಿ ಸಂಖ್ಯೆ-116, 1ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು-1 ಇವರಿಗೆ ಕಳುಹಿಸುವುದು.

(6) ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ಅನುದಾನವನ್ನು SDP ಅಲ್ಲದ ತಾಲ್ಲೂಕುಗಳಲ್ಲಿ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ.

ಈ ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:FD/3/TFP/2016, ದಿ:2-4-2016ರ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಕಂಡಿಕೆ ಸಂಖ್ಯೆ:ಗ್ರಾಅಪ:485:ಆಂಆಸೆ:2016, ದಿ:10-8-2016ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2), ಕರ್ನಾಟಕ, ಬೆಂಗಳೂರು.

4. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು , ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (PMU)(IF), 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
12. ವಿಶೇಷಾಧಿಕಾರಿಗಳು (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
13. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
14. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
15. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಟ್ರಜರಿ ಡಿಪಾರ್ಟ್‌ಮೆಂಟ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
16. ಅಧೀನ ಕಾರ್ಯದರ್ಶಿಗಳು (ವೆಚ್ಚ-6), ಜಿ.ಪಂ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
17. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, 3ನೇ ಮಹಡಿ, ಬೆಂಗಳೂರು-9.
18. ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಬೆಂಗಳೂರು-9.
19. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
20. ಎಲ್ಲಾ ಪಂಚಾಯತ್ ರಾಜ್ ಇಂಜನಿರಿಂಗ್ ವೃತ್ತಗಳ ಅಧೀಕ್ಷಕ ಇಂಜನಿಯರುಗಳಿಗೆ.
21. ಎಲ್ಲಾ ಪಿ.ಎಂ.ಜಿ.ಎಸ್.ವೈ ಯೋಜನಾ ವಿಭಾಗಗಳ ಕಾರ್ಯಪಾಲಕ ಇಂಜನಿಯರುಗಳಿಗೆ
22. ಎಲ್ಲಾ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜನಿಯರುಗಳಿಗೆ.
23. ಮಾಹಿತಿ ಕೇಂದ್ರಕ್ಕೆ (10 ಪ್ರತಿಗಳು).
24. ರಕ್ಷಾ ಕಡತ/ ಹೆಚ್ಚುವರಿ ಪ್ರತಿ.